


'ನ್ಯಾಷನಲ್ ಗೇಮ್ಸ್'ನಲ್ಲಿ ಚಿನ್ನದ ಪದಕ ಗೆದ್ದ ಕರ್ನಾಟಕ ಹಾಕಿ ತಂಡದ ಸಂಭ್ರಮ

ಬಂಡು ಪಾಟೀಲ 1964ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿ ಆಡಿದ್ದರು. 1962ರಲ್ಲಿ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಬೆಳ್ಳಿ ಗೆದ್ದಾಗಲೂ ಆಡಿದ್ದರು. ಸೆಟ್ಲ್‌ಮೆಂಟ್‌ನಲ್ಲಿ ಆರಂಭವಾದ ಹಾಕಿ ಕಲಿಕೆ ಬಂಡು ಪಾಟೀಲ ಅವರನ್ನು ದೇಶದಾದ್ಯಂತ ಖ್ಯಾತಿ ಪಡೆಯುವಂತೆ ಮಾಡಿತು.

ಈಗಲೂ ಹುಬ್ಬಳ್ಳಿ, ಗದಗ, ಬೆಳಗಾವಿ, ಬಾಗಲಕೋಟೆ, ವಿಜಯಪುರ ಮತ್ತು ಬಳ್ಳಾರಿಗೆ ಹೋದರೆ ಸೆಟ್ಲಮೆಂಟ್ ಪ್ರದೇಶಗಳು ಕಾಣುತ್ತವೆ. ಬ್ರಿಟಿಷರ ಕಾಲದಲ್ಲಿ ನಿರ್ಮಾಣವಾದ ಸೆಟ್ಲಮೆಂಟ್‌ಗಳ ಜನರಿಗೆ ಹಾಕಿ ನಿತ್ಯ ಉಸಿರಾಗಿದೆ. ಹುಬ್ಬಳ್ಳಿ, ಗದಗದ ಸೆಟ್ಲಮೆಂಟ್ ಪ್ರದೇಶಗಳ ಪ್ರತಿ ಮನೆಯಲ್ಲಿ ಈಗಲೂ ಕನಿಷ್ಠ ಒಬ್ಬ ಹಾಕಿ ಆಟಗಾರ ಸಿಗುತ್ತಾನೆ. ಗದಗ–ಬೆಟಗೇರಿಯ 'ಹನುಮಾನ್ ಬ್ಲೆಸಿಂಗ್ಸ್ ಕ್ಲಬ್' ಉತ್ತರ ಕರ್ನಾಟಕದಲ್ಲಿ ಐದು ದಶಕದಿಂದ ಹಾಕಿಯನ್ನು ಪೋಷಿಸಿಕೊಂಡು ಬಂದಿದೆ.

ಗದುಗಿನ ಬೇನು ಭಾಟ್, ಎಚ್.ವೈ. ಸಿದ್ಲಿಂಗ್, ರಾಚಯ್ಯ, ರಾಜು ಬಗಾಡೆ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡಿದವರು. ರಾಜು ಬಗಾಡೆ 1990ರ ದಶಕದಲ್ಲಿ ಬೆಂಗಳೂರಿನ ಕ್ರೀಡಾ ಹಾಸ್ಟೆಲ್‌ನಲ್ಲಿ ಕೆಲವು ವರ್ಷ ಆಡಿದ್ದರು. ಬೆಂಗಳೂರು ವಿಶ್ವವಿದ್ಯಾಲಯ ತಂಡದ ನಾಯಕರಾಗಿದ್ದರೂ

## ಸಮಗ್ರ ಕರ್ನಾಟಕ ತಂಡವೇ ಯಶಸ್ಸಿಗೆ ಕಾರಣ

◆ **ರಾಷ್ಟ್ರೀಯ ಗೇಮ್ಸ್‌ನಲ್ಲಿ ಕರ್ನಾಟಕ ತಂಡ ಮೊದಲ ಬಾರಿಗೆ ಚಿನ್ನದ ಪದಕ ಗೆದ್ದ ಸಾಧನೆಯ ಬಗ್ಗೆ ಹೇಳಿ.**

ಬಲಿಷ್ಠ ಶಕ್ತಿ ಹೊಂದಿರುವ ತಂಡಗಳು ಪಾಲ್ಗೊಂಡಿದ್ದರಿಂದ ಪ್ರತಿ ಪಂದ್ಯವೂ ಸವಾಲಿನಿಂದ ಕೂಡಿತ್ತು. ಕಠಿಣ ಸವಾಲು ಎದುರಾಗುತ್ತದೆ ಎನ್ನುವುದು ಸಹಜವಾಗಿ ಗೊತ್ತಿತ್ತು. ಆದ್ದರಿಂದ ಗೇಮ್ಸ್ ಆರಂಭದ 45 ದಿನಗಳ ಮೊದಲೇ ಬೆಂಗಳೂರಿನಲ್ಲಿ ಶಿಬಿರ ಆಯೋಜಿಸಿ ಅಭ್ಯಾಸ ನಡೆಸಿದ್ದೆವು. ಈ ಸಲದ ನಮ್ಮ ತಂಡ ಹಿರಿಯ ಹಾಗೂ ಕಿರಿಯ ಆಟಗಾರರ ಮಿಶ್ರಣವಾಗಿತ್ತು. ಟೂರ್ನಿಯಲ್ಲಿ ಒಂದೂ ಪಂದ್ಯದಲ್ಲಿ ಸೋಲು ಕಾಣದೆ ಚಿನ್ನದ ಪದಕ ಜಯಿಸಿದ್ದು ವಿಶೇಷ. ತಂಡದ ಈ ಸಾಧನೆಯಿಂದ ಹೊಸ ಆಟಗಾರರಿಗೆ ಸಾಕಷ್ಟು ಅನುಕೂಲವಾಗಲಿದೆ. ಅವರಿಗೆ ಉತ್ತಮ ಅವಕಾಶಗಳು ಸಿಗುತ್ತವೆ.

◆ **ಸಾಕಷ್ಟು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದ ನಿಮಗೆ ರಾಜ್ಯ ತಂಡಕ್ಕೆ ಸಿಕ್ಕ ಚೊಚ್ಚಲ ಚಿನ್ನದ ಪದಕ ವಿಶೇಷವೇ?**

ಕ್ರೀಡಾಪಟುವಾಗಿ ನನಗೆ ಎಲ್ಲಾ ಪದಕಗಳು ಹಾಗೂ ಟೂರ್ನಿಗಳು ಒಂದೇ. ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಎಲ್ಲ ಹಂತದ ಪಂದ್ಯಗಳನ್ನು ಒಂದೇ ರೀತಿಯಲ್ಲಿ ನೋಡುತ್ತೇನೆ. ಆಯಾ ಪಂದ್ಯದಲ್ಲಿ ಪೂರ್ಣ ಸಾಮರ್ಥ್ಯದೊಂದಿಗೆ ಆಡಬೇಕು ಎಂದು ಗುರಿ ಹೊಂದಿರುತ್ತೇನೆ. ಎಲ್ಲಾ ಪದಕಗಳಂತೆ ಇದು ಕೂಡ ಒಂದು.

◆ **ರಾಷ್ಟ್ರೀಯ ಗೇಮ್ಸ್‌ನಲ್ಲಿ ಚಿನ್ನ ಗೆದ್ದ ಕರ್ನಾಟಕ ತಂಡದ ಬಗ್ಗೆ ಹೇಳಿ?**

ಹಿರಿಯರು, ಜೂನಿಯರ್ ಹಂತದಲ್ಲಿ ಆಡಿದ ಅನುಭವ ಹೊಂದಿರುವವರು ಹಾಗೂ ಈಗಷ್ಟೇ ತಂಡದಲ್ಲಿ ಸ್ಥಾನ ಪಡೆದ ಮೂರೂ ತರಹದ ಆಟಗಾರರನ್ನು ಒಳಗೊಂಡ ತಂಡ ನಮ್ಮದಾಗಿತ್ತು. ರಾಷ್ಟ್ರೀಯ ಗೇಮ್ಸ್‌ಗೆ ಅಭ್ಯಾಸ ಆರಂಭಿಸಿದ ಮೊದಲ ದಿನದಿಂದಲೇ ಸಮ್ಮಿಶ್ರ ತಂಡವನ್ನು ಕಟ್ಟುವ ಯೋಜನೆ ನನ್ನದಾಗಿತ್ತು. ಯುವ ಆಟಗಾರರು ಮೈದಾನದಲ್ಲಿ ಅಭ್ಯಾಸ ಮಾಡುವಾಗ ತೋರಿಸುತ್ತಿದ್ದ ಬದ್ಧತೆ, ಹೇಳಿಕೊಟ್ಟ ಪಾಠವನ್ನು ಮೈದಾನದ ಆಚೆಗೆ ಹೇಗೆ ಅಭ್ಯಾಸ ಮಾಡುತ್ತಿದ್ದರು ಎನ್ನುವುದರ ಬಗ್ಗೆ ನಿಗಾ ವಹಿಸಿದ್ದೆವು. ನಾನು ಹಾಗೂ ಕೋಚ್ ಹೇಳಿದ್ದನ್ನು ಹೊಸಬರು ಅನುಸರಿಸುತ್ತಿದ್ದುದು ಅಭ್ಯಾಸದ ವೇಳೆ ಅವರು ತೋರಿಸುತ್ತಿದ್ದ ಸಾಮರ್ಥ್ಯದಿಂದ ಗೊತ್ತಾಗುತ್ತಾ

